# ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ

## (ಕೆಎಸ್ಐಐಡಿಸಿ) (ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

KSIIDC

'ಖನಿಜ ಭವನ', 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1, ದೂ: 080-22258131-33,
ಇ-ಮೇಲ್: murthy.ksiidc@gmail.com / info@ksiidc.com ವೆಬ್‌ಸೈಟ್: www.ksiidc.karnataka.gov.in

## ಶಿವಮೊಗ್ಗ ಮತ್ತು ವಿಜಯಪುರ ವಿಮಾನ ನಿಲ್ದಾಣಗಳಿಗೆ ತಾಂತ್ರಿಕ ಸಿಬ್ಬಂದಿ (ಗುತ್ತಿಗೆ ಆಧಾರದ ಮೇಲೆ) ನೇಮಕಾತಿಗಾಗಿ ಅಧಿಸೂಚನೆ

ಕರ್ನಾಟಕ ಸರ್ಕಾರದ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತವು(ಕೆಎಸ್ಐಐಡಿಸಿ), ಶಿವಮೊಗ್ಗ ಮತ್ತು ವಿಜಯಪುರ ವಿಮಾನ ನಿಲ್ದಾಣಗಳನ್ನು ನಿರ್ವಹಣೆ ಮಾಡುತ್ತಿದೆ. ನಿಗಮವು ಈ ಕೆಳಕಂಡ ಸಿಬ್ಬಂದಿಗಳನ್ನು 01 ವರ್ಷದ ಅವಧಿಗೆ ಕ್ರೋಢೀಕೃತ ಮಾಸಿಕ ವೇತನದೊಂದಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಪ್ರಸ್ತಾಪಿಸಲಾಗಿದೆ. ಅಭ್ಯರ್ಥಿಗಳ ಕಾರ್ಯಕ್ಷಮತೆಯ ಆಧಾರದ ಮೇಲೆ ಒಪ್ಪಂದದ ಅವಧಿಯನ್ನು ಅವಶ್ಯಕತೆಗೆ ಅನುಗುಣವಾಗಿ ಇನ್ನೊಂದು ವರ್ಷದ ಅವಧಿಗೆ ಅಥವಾ ಅದಕ್ಕಿಂತಲೂ ಹೆಚ್ಚಿನ ಅವಧಿಗೆ ವಿಸ್ತರಿಸಬಹುದಾಗಿದೆ.

| ಕ್ರ. ಸಂ. | ಹುದ್ದೆಯ ಹೆಸರು | ವಿದ್ಯಾರ್ಹತೆ ಮತ್ತು ಅನುಭವದ ವಿವರಗಳು | ಕ್ರೋಢೀಕೃತ ವೇತನ ಪ್ರತೀ ತಿಂಗಳು ರೂ. | ವಯೋಮಿತಿ |
|---|---|---|---|---|
| | | **ಶಿವಮೊಗ್ಗ ವಿಮಾನ ನಿಲ್ದಾಣ** | | |
| 1 | **ಶಿವಮೊಗ್ಗ ನಿಲ್ದಾಣಕ್ಕೆ ಏರ್‌ಪೋರ್ಟ್ ಡೈರೆಕ್ಟರ್ (ಒಂದು ಹುದ್ದೆ)** | • ಅಭ್ಯರ್ಥಿಗಳು ಯಾವುದೇ ವಿಭಾಗದಲ್ಲಿ ಪದವಿ ಪಡೆದಿರಬೇಕು. ಬಿಸಿನೆಸ್, ಏವಿಯೇಷನ್ ಅಡ್ಮಿನಿಸ್ಟ್ರೇಷನ್/ಬ್ಯಾಚುಲರ್ ಆಫ್ ಇಂಜಿನಿಯರಿಂಗ್ ಅಥವಾ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಪದವಿ ಪಡೆದವರಿಗೆ ಆದ್ಯತೆ ನೀಡಲಾಗುವುದು.<br>• ವಿಮಾನ ನಿಲ್ದಾಣ ನಿರ್ವಹಣೆಯಲ್ಲಿ ವೃತ್ತಿಪರ ಮಟ್ಟದಲ್ಲಿ ಕಾರ್ಯನಿರ್ವಾಹಕರಾಗಿ 10 ವರ್ಷಗಳ ಅನುಭವ ಹೊಂದಿರಬೇಕು.<br>• ಅಭ್ಯರ್ಥಿಯು ಸ್ವೀಕಾರಾರ್ಹ ಚಾಲನಾ ದಾಖಲೆಗಳೊಂದಿಗೆ ಎಲ್‌ಎಂವಿ/ಹೆಚ್‌ಎಂವಿ ಚಾಲಕರ ಪರವಾನಗಿಯನ್ನು ಹೊಂದಿರಬೇಕು.<br>• ಪೈಲೆಟ್ ಪರವಾನಗಿಗೆ ಆದ್ಯತೆ ನೀಡಲಾಗುವುದು.<br>**ಅಭ್ಯರ್ಥಿಗಳು ಈ ಕೆಳಕಂಡವುಗಳಲ್ಲಿ ಪರಿಣಿತಿಯನ್ನು ಹೊಂದಿರಬೇಕು:**<br>• ಡಿಜಿಸಿಎ ಅನ್ವಯ ವಿಮಾನ ಸುರಕ್ಷತೆ ದಾಖಲಾತಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಬೇಕು ಹಾಗೂ ನಿರ್ವಹಿಸಬೇಕು.<br>• ಕಾನ್ಸೆಪ್ಟ್ ಡಿಸೈನ್ ಏರ್‌ಸೈಡ್ ಇನ್ಫ್ರಾಸ್ಟ್ರಕ್ಚರ್, ಟರ್ಮಿನಲ್ ಸಿಸ್ಟಮ್ಸ್, ಲ್ಯಾಂಡ್ ಸೈಡ್ ಫೆಸಿಲಿಟಿಗಳಲ್ಲಿ ಅಪಾರ ಜ್ಞಾನ ಹೊಂದಿರಬೇಕು ಮತ್ತು<br>• ಗ್ರೌಂಡ್ ಟ್ರಾನ್ಸ್‌ಪೋರ್ಟೇಷನ್ ಟರ್ಮಿನಲ್ ಮತ್ತು ಏರ್‌ಸೈಡ್ ಆಪರೇಷನ್‌ನ ಏಕೀಕರಣ<br>• ಏರೋಸ್ಪೇಸ್ ಡೊಮೈನ್‌ನಲ್ಲಿ ಸಿಸ್ಟಮ್ಸ್ ಸೇಫ್ಟಿ ರಿಕ್ವೈರ್‌ಮೆಂಟ್‌ನ ಅಭಿವೃದ್ಧಿ ಮತ್ತು ವಿಮರ್ಶೆ<br>• ಏರ್ ಟ್ರಾಫಿಕ್ ಕಂಟ್ರೋಲ್ ಪ್ರೊಸೀಜರ್ ಆಪರೇಷನ್ಸ್<br>• ಡಿಜಿಸಿಎ ಒಪ್ಪಿಗೆ ಪಡೆದ ನಂತರ ಏರ್‌ಕ್ರಾಫ್ಟ್ ಮತ್ತು ಏರ್‌ಪೋರ್ಟ್ ಆಪರೇಷನ್ ಮ್ಯಾನ್ಯುಯಲ್, ಪರಿಷ್ಕರಣೆ ತಿದ್ದುಪಡಿಯ ಸಂಯೋಜನೆ | 1,25,000/- | ಕನಿಷ್ಠ ವಯೋಮಿತಿ: 35 ವರ್ಷ ಗರಿಷ್ಠ ವಯೋಮಿತಿ: 55 ವರ್ಷಗಳು |
| 2 | **ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಹೆಡ್ (ಒಂದು ಹುದ್ದೆ)** | • ಅಭ್ಯರ್ಥಿಗಳು ಬಿ.ಇ.(ಎಲೆಕ್ಟ್ರಿಕಲ್).ಎಂಇ/ಎಂ.ಟೆಕ್ ಪದವಿ ಹೊಂದಿರಬೇಕು.<br>• ಬೃಹತ್ ವಿದ್ಯುತ್ ಕಾಮಗಾರಿಗಳು, ಉಪ ಕೇಂದ್ರಗಳು ಮತ್ತು ಪ್ರಸರಣ ನಿರ್ವಹಣೆ ಕಾಮಗಾರಿಗಳನ್ನು ನಿರ್ವಹಣೆ ಮಾಡುವ ಕ್ಷೇತ್ರಗಳಲ್ಲಿ ಮುಖ್ಯವಾಗಿ ಏರ್‌ಪೋರ್ಟ್ ಮತ್ತು ಕೆಪಿಟಿಸಿಎಲ್/ಬೆಸ್ಕಾಂಗಳಲ್ಲಿ 15 ವರ್ಷಗಳ ಅನುಭವ ಹೊಂದಿದವರಿಗೆ ಆದ್ಯತೆ ನೀಡಲಾಗುವುದು. | 80,000/- | ಕನಿಷ್ಠ ವಯೋಮಿತಿ: 35 ವರ್ಷ ಗರಿಷ್ಠ ವಯೋಮಿತಿ: 55 ವರ್ಷಗಳು |
| 3 | **ಐಟಿ-ಕಂ-ನೆಟ್‌ವರ್ಕ್ ಇಂಜಿನಿಯರ್ (ಒಂದು ಹುದ್ದೆ)** | • ಅಭ್ಯರ್ಥಿಗಳು ಎಐಸಿಟಿಇ ಅಥವಾ ಯುಜಿಸಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ ಸಂಸ್ಥೆಯಿಂದ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ಇಂಜಿನಿಯರಿಂಗ್ ಅಥವಾ ಕಂಪ್ಯೂಟರ್ ಇಂಜಿನಿಯರಿಂಗ್‌ನಲ್ಲಿ ಪದವಿ ಹೊಂದಿರಬೇಕು.<br>• ಎಲ್‌ಎಎನ್ ನ ನಿರ್ವಹಣೆ/ ಟ್ರಬಲ್ ಶೂಟಿಂಗ್, ಆಪ್ಟಿಕಲ್ ಫೈಬರ್ ನೆಟ್‌ವರ್ಕ್, ಐಪಿ ಫೋನ್ಸ್, ಐಪಿ ಫೋನ್‌ಗಳಿಗೆ ಸಂಬಂಧಿಸಿದ ಸರ್ವರ್‌ಗಳು, ಸಿಸಿಟಿವಿ ಸ್ವಿಚಸ್, ಸಿಸಿಟಿವಿ ಕೆಮೆರಾಗಳು, ಸಗಟು ಗಾತ್ರದ ಡಾಟಾ ಸ್ಟೋರೇಜ್ ಸಿಸ್ಟಮ್‌ಗಳು, ಫೈರ್ ಅಲಾರಂ ಸಿಸ್ಟಮ್‌ಗಳಿಗೆ ಸಂಬಂಧಿಸಿದ ಪಿಎಲ್‌ಸಿಗಳು, ಫೈರ್/ ಸ್ಮೋಕ್ ಡಿಟೆಕ್ಟರ್ಸ್, ಆಕ್ಸಸ್ ಕಂಟ್ರೋಲ್ ಸಿಸ್ಟಮ್ಸ್, ಡೆಸ್ಕ್ ಟಾಪ್ ಸಿಸ್ಟಮ್ಸ್ ಹಾಗೂ ಪೂರಕ ಹಾರ್ಡ್‌ವೇರ್. ಹಾರ್ಡ್‌ವೇರ್ ಸಂಬಂಧಿತ ಆಟೋಮೇಟಿಕ್ ವೆದರ್ ಸ್ಟೇಷನ್ಸ್, ನೆಟ್‌ವರ್ಕ್ ಸೆಕ್ಯೂರಿಟಿ ಸಿಸ್ಟಮ್ಸ್ ಗಳಲ್ಲಿ 05 ವರ್ಷಗಳ ಅನುಭವ ಹೊಂದಿರಬೇಕು. ಅಭ್ಯರ್ಥಿಗಳು ಬಿಎಸ್‌ಎನ್‌ಎಲ್ ಅಥವಾ ಇತರೆ ಏಜೆನ್ಸಿಗಳೊಂದಿಗೆ ಸಂಪರ್ಕ ಹೊಂದಿರುವುದನ್ನು ನಿರೀಕ್ಷಿಸಲಾಗಿದೆ.<br>• ಅಭ್ಯರ್ಥಿಗಳು ವೆಬ್‌ಸೈಟ್ ಮತ್ತು ಸೋಷಿಯಲ್ ಮೀಡಿಯವನ್ನು ನಿಭಾಯಿಸುವುದು ಸಹಾ ಅಪೇಕ್ಷಣೀಯವಾಗಲಿದೆ. | 50,000/- | ಕನಿಷ್ಠ ವಯೋಮಿತಿ: 25 ವರ್ಷ ಗರಿಷ್ಠ ವಯೋಮಿತಿ: 45 ವರ್ಷ |
| 4 | **ಸಿವಿಲ್ ಇಂಜಿನಿಯರ್ (ಒಂದು ಹುದ್ದೆ)** | • ಅಭ್ಯರ್ಥಿಗಳು ಬಿ.ಇ.(ಸಿವಿಲ್)/ ಡಿಪ್ಲೋಮಾ ಇನ್ ಸಿವಿಲ್ ಪದವಿ ಹೊಂದಿರಬೇಕು<br>• ರನ್‌ವೇ, ರಸ್ತೆಗಳು/ಹೆದ್ದಾರಿಗಳು ಮತ್ತು ವಿಮಾನ ನಿಲ್ದಾಣಗಳ ನಿರ್ವಹಣೆಯಂತಹ ಬೃಹತ್ ಸಿವಿಲ್ ಕಾಮಗಾರಿ ಕ್ಷೇತ್ರದಲ್ಲಿ 10 ವರ್ಷಗಳ ಅನುಭವ ಹೊಂದಿರಬೇಕು. | 50,000/- | ಕನಿಷ್ಠ ವಯೋಮಿತಿ: 25 ವರ್ಷ ಗರಿಷ್ಠ ವಯೋಮಿತಿ: 45 ವರ್ಷ |

| | | | | |
|---|---|---|---|---|
| 5 | **ಟೆಕ್ನೀಷಿಯನ್–ಕಂ–ಆಟೋ ಮೆಕಾನಿಕ್ (ಒಂದು ಹುದ್ದೆ)** | • ಎಲೆಕ್ಟ್ರಿಕಲ್, ಮೆಕಾನಿಕಲ್ ಅಥವಾ ಆಟೋಮೊಬೈಲ್ ಇಂಜಿನಿಯರಿಂಗ್‌ನಲ್ಲಿ 3 ವರ್ಷಗಳ ಡಿಪ್ಲೋಮ<br>• 3 ರಿಂದ 5 ವರ್ಷಗಳ ಅನುಭವದೊಂದಿಗೆ ಆಟೋಮೊಬೈಲ್ ಇಂಜಿನಿಯರಿಂಗ್‌ನಲ್ಲಿ ಐಟಿಐ ಪ್ರಮಾಣಪತ್ರ<br>• ಮಾನ್ಯತೆ ಹೊಂದಿರುವ ಡ್ರೈವಿಂಗ್ ಲೈಸೆನ್ಸ್ ಹೊಂದಿರಬೇಕು<br>• ಅಗ್ನಿಶಾಮಕ ವಾಹನ/ಭಾರೀ ವಾಹನಗಳನ್ನು ನಿಭಾಯಿಸುವಲ್ಲಿ ಪರಿಣಿತಿ ಹೊಂದಿರಬೇಕು<br>• ಪ್ರಾರಂಭದಲ್ಲಿ ಉಂಟಾಗುವ ಸಮಸ್ಯೆಗಳನ್ನು ಸರಿಪಡಿಸುವ ಸಾಮರ್ಥ್ಯವಿರಬೇಕು ಹಾಗೂ ಏರ್‌ಫೀಲ್ಡ್ ಕ್ರಾಶ್ ಫೈರ್ ಟೆಂಡರ್ಸ್, ಪಂಪ್ಸ್, ಪ್ರೈಮರ್ಸ್, ಕೆಮಿಕಲ್ ಪೌಡರ್ ಹಾಗೂ ಇತರೆ ಸಿಸ್ಟಮ್‌ಗಳನ್ನು ಸರಿಪಡಿಸುವಲ್ಲಿ ಪ್ರಾಥಮಿಕ ಜ್ಞಾನ ಹೊಂದಿರಬೇಕು | 40,000/– | ಕನಿಷ್ಠ ವಯೋಮಿತಿ: 25 ವರ್ಷ ಗರಿಷ್ಠ ವಯೋಮಿತಿ: 45 ವರ್ಷ |
| 6 | **ಅಸಿಸ್ಟೆಂಟ್ ಏರ್‌ಸೈಡ್ ಆಪರೇಷನಲ್ ಮ್ಯಾನೇಜರ್ (ಒಂದು ಹುದ್ದೆ)** | • ಏರ್‌ಸೈಡ್ ಆಪರೇಷನ್ಸ್/ಸಿವಿಲ್ ಏವಿಯೇಷನ್ಸ್/ಪಿಎಸ್‌ಯು ಏರ್‌ಪೋರ್ಟ್/ಪ್ರೈವೇಟ್ ಏರ್‌ಪೋರ್ಟ್‌ಗಳಿಗೆ ' ಸಂಬಂಧಿಸಿದಂತೆ 3 ರಿಂದ 5 ವರ್ಷಗಳ ಅನುಭವ ಹೊಂದಿದ್ದು ಯಾವುದೇ ವಿಷಯದಲ್ಲಿ ಪದವಿ ಹೊಂದಿರಬೇಕು<br>• ರನ್‌ವೇಗಳು ಹಾಗೂ ಟ್ಯಾಕ್ಸಿವೇಗಳಲ್ಲಿ ಅಪಾಯಗಳನ್ನು ತಪಾಸಣೆ ಮಾಡುವ, ಗುರುತಿಸುವ ಹಾಗೂ ತೆರವುಗೊಳಿಸುವಲ್ಲಿ ಅನುಭವ ಹೊಂದಿರಬೇಕು.<br>• ಏರ್‌ಕ್ರಾಫ್ಟ್‌ಗಳಿಗೆ ಬ್ಯಾಗೇಜ್ ಬೆಲ್ಟ್‌ಗಳು ಹಾಗೂ ಸೂಕ್ತ ಪಾರ್ಕಿಂಗ್ ಸ್ಟಾಂಡ್ ನಿಯೋಜಿಸುವ ಹಾಗೂ ವಿಮಾನವು ಸುಗಮವಾಗಿ ಹಾರಾಟ ಮಾಡಲು ಹಾಗೂ ಇಳಿಯಲು ಏರ್‌ಲೈನ್ಸ್ ಗ್ರೌಂಡ್ ಸ್ಟಾಫ್‌ನೊಂದಿಗೆ, ಎಟಿಸಿಯೊಂದಿಗೆ ಸಮನ್ವಯತೆ ಸಾಧಿಸುವಂತಿರಬೇಕು<br>• ಏರ್‌ಸೈಡ್ ಕಾರ್ಯಾಚರಣೆಗಳಿಗೆ ಸಂಬಂಧಿಸಿದಂತೆ ನಾಗರಿಕ ವಿಮಾನಯಾನ ಮತ್ತು ಇತರೆ ಅನ್ವಯವಾಗುವ ಕಾನೂನುಗಳು ಮತ್ತು ನಿಬಂಧನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವುದು.<br>• ಡಿಜಿಸಿಎ ನಿಬಂಧನೆಗಳ ಕುರಿತಾದ ಜ್ಞಾನ ಹೊಂದಿರಬೇಕು | 40,000/– | ಕನಿಷ್ಠ ವಯೋಮಿತಿ: 35 ವರ್ಷ ಗರಿಷ್ಠ ವಯೋಮಿತಿ: 55 ವರ್ಷ |
| 7 | **ಎಲೆಕ್ಟ್ರಿಕಲ್ ಇಂಜಿನಿಯರ್–ಮೈನ್‌ಟೆನೆನ್ಸ್ (ಒಂದು ಹುದ್ದೆ)** | • ಅಭ್ಯರ್ಥಿಗಳು ಬಿ.ಇ. ಪದವಿಯೊಂದಿಗೆ 2 ರಿಂದ 3 ವರ್ಷಗಳ ಅನುಭವ ಹೊಂದಿರಬೇಕು ಅಥವಾ ಡಿಪ್ಲೊಮಾ ಇನ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ 5 ವರ್ಷಗಳ ಅನುಭವ ಹೊಂದಿರಬೇಕು.<br>• ಅಭ್ಯರ್ಥಿಗಳು ಕನ್ವೇಯರ್ ಬೆಲ್ಟ್‌ಗಳು, ಫೀಡರ್ಸ್ ಮುಂತಾದ ಎಲೆಕ್ಟ್ರೋ ಮೆಕ್ಯಾನಿಕಲ್ ಸಾಮಗ್ರಿಗಳನ್ನು ನಿರ್ವಹಣೆ ಮಾಡುವಲ್ಲಿ ಅನುಭವ ಹೊಂದಿರಬೇಕು. | 40,000/– | ಕನಿಷ್ಠ ವಯೋಮಿತಿ: 35 ವರ್ಷ ಗರಿಷ್ಠ ವಯೋಮಿತಿ: 55 ವರ್ಷ |
| | | **ವಿಜಯಪುರ ವಿಮಾನ ನಿಲ್ದಾಣ** | | |
| 01 | **ಸಿವಿಲ್ ಇಂಜಿನಿಯರ್ ಹೆಡ್ (ಒಂದು ಹುದ್ದೆ)** | • ಅಭ್ಯರ್ಥಿಗಳು ಬಿ.ಇ.(ಸಿವಿಲ್)/ಎಂ.ಇ/ಎಂಟೆಕ್ ನಲ್ಲಿ ಪದವಿ ಹೊಂದಿರಬೇಕು.<br>• ರನ್‌ವೇಗಳು, ರಸ್ತೆಗಳು ಹಾಗೂ ವಿಮಾನ ನಿಲ್ದಾಣಗಳ ನಿರ್ವಹಣೆಯಂತಹ ಬೃಹತ್ ಸಿವಿಲ್ ನಿರ್ಮಾಣ ಕಾಮಗಾರಿಗಳಲ್ಲಿ 15 ವರ್ಷಗಳ ಅನುಭವ ಹೊಂದಿರಬೇಕು | 80,000/– | ಕನಿಷ್ಠ ವಯೋಮಿತಿ: 35 ವರ್ಷ ಗರಿಷ್ಠ ವಯೋಮಿತಿ: 55 ವರ್ಷ |
| 02 | **ಏರ್‌ಸೈಡ್ ಆಪರೇಷನಲ್ ಮ್ಯಾನೇಜರ್ (ಒಂದು ಹುದ್ದೆ)** | • ಅಭ್ಯರ್ಥಿಗಳು ಯಾವುದೇ ಪದವಿಯನ್ನು ಹೊಂದಿರಬಹುದಾಗಿದೆ.<br>• ವಿಮಾನ ನಿಲ್ದಾಣಗಳಲ್ಲಿ ಏರ್‌ಸೈಡ್ ನಿರ್ವಹಣೆಯಲ್ಲಿ 10 ವರ್ಷಗಳ ಅನುಭವ ಹೊಂದಿರಬೇಕು.<br>• ರನ್‌ವೇಗಳು ಮತ್ತು ಟ್ಯಾಕ್ಸೀ ವೇಗಳಲ್ಲಿ ಉಂಟಾಗುವ ಅಪಾಯಗಳ ತಪಾಸಣೆ, ಗುರುತಿಸುವಿಕೆ ಮತ್ತು ತೆರವುಗೊಳಿಸುವಲ್ಲಿ ಅನುಭವ ಹೊಂದಿರಬೇಕು.<br>• ಏರ್‌ಕ್ರಾಫ್ಟ್‌ಗೆ ಬ್ಯಾಗೇಜ್ ಬೆಲ್ಟ್‌ಗಳು ಮತ್ತು ಸೂಕ್ತ ಪಾರ್ಕಿಂಗ್ ಸ್ಟಾಂಡ್‌ಗಳನ್ನು ನಿಯೋಜಿಸುವುದು, ವಿಮಾನವನ್ನು ಸರಾಗವಾಗಿ ಲ್ಯಾಂಡಿಂಗ್ ಮತ್ತು ಟೇಕ್ ಆಫ್ ಮಾಡಲು ಏರ್‌ಲೈನ್ಸ್ ಎಟಿಸಿ ಗ್ರೌಂಡ್ ಸಿಬ್ಬಂದಿಯೊಂದಿಗೆ ಸಮನ್ವಯ ಸಾಧಿಸುವುದು.<br>• ಏರ್‌ಸೈಡ್ ಕಾರ್ಯಾಚರಣೆಗಳಿಗೆ ಸಂಬಂಧಿಸಿದಂತೆ ನಾಗರಿಕ ವಿಮಾನಯಾನ ಮತ್ತು ಇತರೆ ಅನ್ವಯವಾಗುವ ಕಾನೂನುಗಳು ಮತ್ತು ನಿಬಂಧನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವುದು.<br>• ಡಿಜಿಸಿಎ ನಿಯಮಾವಳಿಗಳ ಜ್ಞಾನಹೊಂದಿರಬೇಕು | 75,000/– | ಕನಿಷ್ಠ ವಯೋಮಿತಿ: 35 ವರ್ಷ ಗರಿಷ್ಠ ವಯೋಮಿತಿ: 55 ವರ್ಷ |

(1) ಆಸಕ್ತ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆ ಮತ್ತು ಅನುಭವದ ವಿವರಗಳನ್ನೊಳಗೊಂಡ ಅರ್ಜಿಯನ್ನು ಇ–ಮೇಲ್/ ಶೀಘ್ರ ಅಂಚೆ/ ಖುದ್ದಾಗಿ ಈ ಪ್ರಕಟಣೆ ಪ್ರಕಟಣೆಗೊಂಡ **07 ದಿನಗಳ ಒಳಗಾಗಿ** ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕು. (2) ನೇರ ಸಂದರ್ಶನದ ದಿನಾಂಕ ಮತ್ತು ಸಮಯವನ್ನು ನಂತರ ತಿಳಿಸಲಾಗುವುದು. (3) ಆಯ್ಕೆಯಾದ ಅಭ್ಯರ್ಥಿಗಳನ್ನು ಶಿವಮೊಗ್ಗ ವಿಮಾನ ನಿಲ್ದಾಣ ಹಾಗೂ ವಿಜಯಪುರ ವಿಮಾನ ನಿಲ್ದಾಣಗಳಲ್ಲಿ ನಿಯೋಜಿಸಲಾಗುವುದು. (4) ಯಾವುದೇ ರೀತಿಯ ಸ್ಪಷ್ಟೀಕರಣಗಳಿಗೆ ದಯವಿಟ್ಟು ಮೊಬೈಲ್ ಸಂಖ್ಯೆ 98458 33566 ಸಂಪರ್ಕಿಸಬಹುದು

**ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು**